

# ಮುದ್ರಾ ಪಂಡಿತ

ಚಿತ್ರ: ಭಾವುಪತ್ತಾರ್

ಭಾಷೆಯನ್ನು ಕಂಡು ಹಿಡಿಯುವುದಕ್ಕೆ ಮೊದಲು ಮಾನವ ಸನ್ನೆಗಳ ಮುಖಾಂತರ ತನ್ನ ಭಾವನೆಗಳನ್ನು ಇನ್ನೊಬ್ಬರಿಗೆ ತಿಳಿಸುತ್ತಿದ್ದ. ಕ್ರಮೇಣ ಈ ಸನ್ನೆಯ ಭಾಷೆಯೇ ವಿಸ್ತಾರಗೊಂಡು ಮುದ್ರಾ ಶಾಸ್ತ್ರವೆಂಬ ಹೆಸರನ್ನು ಪಡೆಯಿತು. ಈ ಸನ್ನೆಯ ಭಾಷೆಯಲ್ಲಿ ಪ್ರಾವಿಣ್ಯತೆಯನ್ನು ಪಡೆದವರು ಮುದ್ರಾಪಂಡಿತರೆಂದು ಕರೆಸಿಕೊಂಡರು.

ಒಂದು ರಾಜ್ಯದಲ್ಲಿ ಹೀಗೊಬ್ಬ ಮುದ್ರಾ ಪಂಡಿತನಿದ್ದ. ಅವನಿಗೆ ತನ್ನ ಪಾಂಡಿತ್ಯದ ಬಗ್ಗೆ ತುಂಬ ಹೆಮ್ಮೆಯಿತ್ತು. ಅವನು ಬೇರೆ ಬೇರೆ ರಾಜ್ಯಗಳಿಗೆ ಹೋಗಿ ಅಲ್ಲಿಯ ಮುದ್ರಾ ಪಂಡಿತರನ್ನು ವಾದದಲ್ಲಿ ಸೋಲಿಸಿ ಅಲ್ಲಿಯ ರಾಜನಿಂದ ಬಿರುದು ಬಾವಲಿಗಳನ್ನು ಪಡೆದುಕೊಂಡು ಬರುತ್ತಿದ್ದ.

ಒಬ್ಬ ಅರಸನು ತನ್ನ ರಾಜ್ಯದಲ್ಲಿ ಎಲ್ಲ ಕಲೆಗಳಿಗೂ ಪ್ರೊತ್ಸಾಹ ನೀಡಿದ್ದನು. ಆತನ ಆ ಸ್ಥಾನದಲ್ಲಿ, ತತ್ವಶಾಸ್ತ್ರ, ವ್ಯಾಕರಣ, ಜೋತಿಷ್ಯ, ಮಿಮಾಂಸೆ ಹೀಗೆ ಅನೇಕ ವಿಷಯಗಳಿಗೆ ಸಂಬಂಧಿಸಿದ ಪಂಡಿತರಿದ್ದರು. ಅವನ ಆಸ್ಥಾನದಲ್ಲಿ ಮುದ್ರಾ ಪಂಡಿತನೊಬ್ಬ ಇರಲಿಲ್ಲ. ಇದನ್ನು ಅರಿತ ಪಕ್ಕದ ರಾಜ್ಯದ ಮುದ್ರಾ ಪಂಡಿತನೊಬ್ಬನು ಆ ಅರಸನಿಗೆ ಸಂದೇಶವೊಂದನ್ನು ಕಳುಹಿಸಿ ತಾನು ಆ ರಾಜ್ಯಕ್ಕೆ ಬರುವುದಾಗಿಯೂ ಮತ್ತು ತಮ್ಮ ರಾಜ್ಯದ ಮುದ್ರಾ ಪಂಡಿತನೊಂದಿಗೆ ವಾದ ಮಾಡುವುದಾಗಿಯೂ ಆ ವಾದದಲ್ಲಿ ತಾನು ಸೋತರೆ ತನ್ನ ಎಲ್ಲ ಬಿರುದು ಬಾವಲಿಗಳನ್ನು ತಮ್ಮ ಪಂಡಿತನಿಗೆ ಒಪ್ಪಿಸಿ ತೆರಳುವುದಾಗಿಯೂ ಒಂದು ವೇಳೆ ತಮ್ಮ ಮುದ್ರಾ ಪಂಡಿತನು ಸೋತರೆ ತಮ್ಮ ಅರ್ಧ ರಾಜ್ಯವನ್ನು ನನಗೆ ನೀಡಬೇಕೆಂದು ಕರಾರು ಹಾಕಿದನು. ಒಂದು ವೇಳೆ ನೀವು ನನ್ನ ಆಹ್ವಾನವನ್ನು ಸ್ವೀಕರಿಸದಿದ್ದರೆ ಸೋಲನ್ನು ಒಪ್ಪಿಕೊಂಡು, ಶರಣಾಗಿ ತನ್ನನ್ನು ಸನ್ಮಾನಿಸಬೇಕೆಂದು ತಿಳಿಸಿದನು.

ಅವನು ಕಳುಹಿಸಿದ್ದ ಸಂದೇಶ ಯಾವುದೇ ಅರಸನ ಸ್ವಾಭಿಮಾನವನ್ನು ಕೆಣಕುವಂತಿತ್ತು. ಅರಸನಿಗೆ ಚಿಂತೆ ಕಾಡತೊಡಗಿತು. ಅವನು ನೀಡಿದ ಪಂಥಾಹ್ವಾನವನ್ನು ಸ್ವೀಕರಿಸುವಂತೆಯೂ ಇಲ್ಲ, ನಿರಾಕರಿಸುವಂತೆಯೂ ಇಲ್ಲ. ಸ್ವೀಕರಿಸಿದರೆ ತನ್ನ ರಾಜ್ಯದಲ್ಲಿ ಅವನನ್ನು ಎದುರಿಸಬಲ್ಲ ಮುದ್ರಾ ಪಂಡಿತನಿಲ್ಲ, ಸ್ವೀಕರಿಸದಿದ್ದರೆ ಅವನಿಗೆ ಶರಣಾಗತನಾಗಬೇಕು. ಆದರೆ ಆ ಪಂಡಿತನ ಎದುರಿಗೆ ಸೋಲನ್ನು ಒಪ್ಪಿಕೊಳ್ಳುವುದು ಅರಸನಿಗೆ ಇಷ್ಟವಿರಲಿಲ್ಲ.

ಅರಸನು ತನ್ನ ಆಸ್ಥಾನದ ಎಲ್ಲ ಪಂಡಿತರ ಸಭೆಯನ್ನು ಕರೆದು ಈ ಸಮಸ್ಯೆಗೆ ಪರಿಹಾರ ಸೂಚಿಸಬೇಕೆಂದು ಕೇಳಿದನು. ಆದರೆ ಯಾರ ಬಳಿಯೂ ಆ ಸಮಸ್ಯೆಗೆ ಪರಿಹಾರವಿರಲಿಲ್ಲ. ಆಗ ಅದರಲ್ಲೇ ಸ್ವಲ್ಪ ಜಾಣನಾದ ಪಂಡಿತನೊಬ್ಬನು ಮಹಾರಾಜರೇ, ನೇರವಾದ ಮಾರ್ಗದಿಂದ ನಾವು ಆ ಪಂಡಿತನನ್ನು ಸೋಲಿಸುವಂತೆ ಕಾಣುತ್ತಿಲ್ಲ. ಆದ್ದರಿಂದ ಕುಟಿಲೋಪಾಯದಿಂದಲೇ ನಾವು ಅವನನ್ನು ಎದುರಿಸಬೇಕು. ನಾವು ನಮ್ಮ ರಾಜ್ಯದಲ್ಲಿರುವ ಜಾಣ ಹಾಗು ಕುಟಿಲನಾಗಿರುವ ಒಬ್ಬ ವ್ಯಕ್ತಿಗೆ ಪಂಡಿತನಂತೆ ವೇಷ ತೊಡಿಸಿ ಅವನೊಂದಿಗೆ ವಾದಕ್ಕೆ ಕಳುಹಿಸಬೇಕು. ಒಂದು ವೇಳೆ ಪಂಡಿತವೇಷಧಾರಿ ನಮ್ಮ ವ್ಯಕ್ತಿ ಅವನನ್ನು ವಾದದಲ್ಲಿ ಸೋಲಿಸಿದರೆ ಒಳ್ಳೆಯದೇ ಆಯಿತು. ಸೋತರೂ ಅವನ ಮರ್ಯಾದೆಗೆ ಕುಂದು ಬರುವುದಿಲ್ಲ ಏಕೆಂದರೆ ಅವನು ಪಂಡಿತನೇ ಆಗಿರುವುದಿಲ್ಲ ಎಂದು ಹೇಳಿದನು. ಈ ಸಲಹೆಗೆ ಎಲ್ಲ ಪಂಡಿತರು ತಮ್ಮ ಒಪ್ಪಿಗೆ ಸೂಚಿಸಿದರು. ಒಂದು ಅವಕಾಶವನ್ನು ಏಕೆ ತೆಗೆದುಕೊಳ್ಳಬಾರದು ಎಂದು ಅರಸನಿಗೂ ಅನಿಸಿತು.

ಆದರೆ ಅಂತಹ ವ್ಯಕ್ತಿಯನ್ನು ಹುಡುಕುವುದೆಲ್ಲಿ? ಅದಕ್ಕೆ ಆ ಪಂಡಿತನೇ